**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 394 |
| ಮಾನ್ಯ ಸದಸ್ಯರ ಹೆಸರು: | ಡಾ: ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ: | 19.08.2026 |
| ಉತ್ತರಿಸುವಸಚಿವರು: | ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಸ್ತೆ ಬದಿ ಆಹಾರ ಮಳಿಗೆಗಳು, ಹೋಟೆಲ್‌ಗಳು, ಬೇಕರಿಗಳು, ಸಿಹಿ ತಿಂಡಿ ಅಂಗಡಿಗಳು ಹಾಗೂ ಇತರೆ ಆಹಾರ ತಯಾರಿಕಾ ಕೇಂದ್ರಗಳಲ್ಲಿ ನಿಷೇಧಿತ ಅಥವಾ ಆರೋಗ್ಯಕ್ಕೆ ಹಾನಿಕಾರಕ ರಾಸಾಯನಿಕಗಳು, ಕೃತಕ ಬಣ್ಣಗಳು ಹಾಗೂ ಇತರೆ ಕಲಬೆರಕೆ ಪದಾರ್ಥಗಳ ಬಳಕೆಯನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ರಸ್ತೆ, ಬದಿ ಆಹಾರ ಮಳಿಗೆಗಳು, ಹೋಟೆಲ್‌ಗಳು, ಬೇಕರಿಗಳು, ಸಿಹಿತಿಂಡಿ ಅಂಗಡಿಗಳು ಹಾಗೂ ಇತರೆ ಆಹಾರ ತಯಾರಿಕಾ ಕೇಂದ್ರಗಳಲ್ಲಿ ನಿಷೇಧಿತ ಅಥವಾ ಆರೋಗ್ಯಕ್ಕೆ ಹಾನಿಕಾರಕ ರಾಸಾಯನಿಕಗಳು, ಕೃತಕ ಬಣ್ಣಗಳು, ಸಂರಕ್ಷಕ ವಸ್ತುಗಳು ಹಾಗೂ ಇತರೆ ಕಲಬೆರಕೆ ಪದಾರ್ಥಗಳ ಬಳಕೆಯನ್ನು ತಡೆಗಟ್ಟಲು ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯ ಆಹಾರ ಸುರಕ್ಷತಾ ವಿಭಾಗದ ಅಂಕಿತಾಧಿಕಾರಿಗಳು ಮತ್ತು ಆಹಾರ ಸುರಕ್ಷತಾಧಿಕಾರಿಗಳು ಕಾಲಕಾಲಕ್ಕೆ ಆಹಾರ ಉದ್ದಿಮೆಗಳಿಗೆ ತಪಾಸಣಾ ಭೇಟಿ ನೀಡಿ ಕೃತಕ ಬಣ್ಣ ಬಳಸದಂತೆ ಇತರೆ ಕಲಬೆರಕೆ ಆಹಾರ ಪದಾರ್ಥಗಳನ್ನು ಬಳಸದಂತೆ ಅರಿವು ಮೂಡಿಸಲಾಗುತ್ತಿದೆ. ಈ ಕುರಿತು ಕಳೆದ ಮೂರು ವರ್ಷಗಳಲ್ಲಿ 94,220 ಆಹಾರ ಉದ್ದಿಮೆದಾರರಿಗೆ ಇಲಾಖಾ ವತಿಯಿಂದ FoSTaC ತರಬೇತಿಯನ್ನು ನೀಡಲಾಗಿರುತ್ತದೆ.<br><br>ಮುಂದುವರೆದು, ಇಲಾಖೆಯಡಿ ಒಂದು ಸಂಚಾರಿ ಆಹಾರ ಪ್ರಯೋಗಾಲಯ ಕರ್ತವ್ಯ ನಿರ್ವಹಿಸುತ್ತಿದ್ದು, ರಾಜ್ಯಾದ್ಯಂತ ಆಹಾರ ಮಾದರಿಗಳ ವಿಶ್ಲೇಷಣೆ, ತರಬೇತಿ ನೀಡುವಿಕೆ ಹಾಗೂ ಸಾರ್ವಜನಿಕರಿಗೆ ಅರಿವು ಮೂಡಿಸಲು ಬಳಸಲಾಗುತ್ತಿದ್ದು, 189 ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ. ಅಲ್ಲದೆ ಸದರಿ ಪ್ರಯೋಗಾಲಯದಲ್ಲಿ 1564 ಆಹಾರ ಮಾದರಿಗಳನ್ನು ಪರೀಕ್ಷೆಗೆ ಒಳಪಡಿಸಲಾಗಿರುತ್ತದೆ. |
| ಆ) | ಕಳೆದ ಮೂರು ವರ್ಷಗಳಲ್ಲಿ ರಾಜ್ಯಾದ್ಯಂತ ಎಷ್ಟು ಆಹಾರ ಮಾದರಿಗಳನ್ನು ಸಂಗ್ರಹಿಸಿ ಪರೀಕ್ಷಿಸಲಾಗಿದೆ? ಅವುಗಳಲ್ಲಿ ಎಷ್ಟು ಮಾದರಿಗಳು ಕಲಬೆರಕೆಯಾಗಿದ್ದವು, ಕಳಪೆ ಗುಣಮಟ್ಟದ್ದಾಗಿದ್ದವು ಅಥವಾ ಆಹಾರ ಸುರಕ್ಷತಾ ಮಾನದಂಡಗಳನ್ನು ಉಲ್ಲಂಘಿಸಿದ್ದವು? (ಜಿಲ್ಲಾವಾರು ವಿವರ ನೀಡುವುದು.) | ಕಳೆದ ಮೂರು ವರ್ಷಗಳಲ್ಲಿ ರಾಜ್ಯಾದ್ಯಂತ ಸಂಗ್ರಹಿಸಿ ಪರೀಕ್ಷಿಸಲಾದ ಕಾನೂನಾತ್ಮಕ ಆಹಾರ ಮಾದರಿಗಳ ಸಂಖ್ಯೆ, ಅವುಗಳಲ್ಲಿ ಅಸುರಕ್ಷಿತ ಮತ್ತು Substandard ಎಂದು ವರದಿಯಾದ ಆಹಾರ ಮಾದರಿಗಳ ಸಂಖ್ಯೆಯು ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1 ರಲ್ಲಿ ನೀಡಿದೆ. |
| ಇ) | ತರಕಾರಿಗಳು, ಹಣ್ಣುಗಳು, ಧಾನ್ಯಗಳು, ಹಾಲು ಮತ್ತು ಹಾಲಿನ ಉತ್ಪನ್ನಗಳು, ಮಾಂಸ ಹಾಗೂ ಇತರೆ ಆಹಾರ ಪದಾರ್ಥಗಳಲ್ಲಿ ಕೀಟನಾಶಕ ಅವಶೇಷಗಳು, ಭಾರಿ ಲೋಹಗಳು, ಕೃತಕ ಬಣ್ಣಗಳು ಹಾಗೂ ಇತರೆ ಹಾನಿಕರ ರಾಸಾಯನಿಕಗಳ ಪ್ರಮಾಣವನ್ನು ಪರೀಕ್ಷಿಸುವ ವ್ಯವಸ್ಥೆ ಇದೆಯೇ? ಕಳೆದ ಮೂರು | ಇದೆ.<br><br>ಕಳೆದ ಮೂರು ವರ್ಷಗಳಲ್ಲಿ ಪರೀಕ್ಷಿಸಲಾದ ಕಾನೂನಾತ್ಮಕ ಆಹಾರ ಮಾದರಿಗಳ ಸಂಖ್ಯೆ: 27,695.<br><br>ಅವುಗಳಲ್ಲಿ ನಿಗದಿತ ಮಿತಿಗಿಂತ ಹೆಚ್ಚಿನ ಪ್ರಮಾಣ ಪತ್ತೆಯಾಗಿರುವುದು ಒಳಗೊಂಡಂತೆ 750 ಮಾದರಿಗಳು |

| | | |
|---|---|---|
| | ವರ್ಷಗಳಲ್ಲಿ ಎಷ್ಟು ಮಾದರಿಗಳನ್ನು ಪರೀಕ್ಷಿಸಲಾಗಿದೆ ಮತ್ತು ಎಷ್ಟು ಮಾದರಿಗಳಲ್ಲಿ ನಿಗದಿತ ಮಿತಿಗಿಂತ ಹೆಚ್ಚಿನ ಪ್ರಮಾಣ ಪತ್ತೆಯಾಗಿದೆ? | ಅಸುರಕ್ಷಿತ ಎಂದು ವರದಿಯಾಗಿದೆ. |
| ಈ) | ಆಹಾರ ಸುರಕ್ಷತಾ ನಿಯಮಗಳನ್ನು ಉಲ್ಲಂಘಿಸಿದ ಹೋಟೆಲ್‌ಗಳು, ರಸ್ತೆಬದಿ ಆಹಾರ ಮಳಿಗೆಗಳು, ಬೇಕರಿಗಳು, ಸಿಹಿ ತಿಂಡಿ ಅಂಗಡಿಗಳು ಹಾಗೂ ಆಹಾರ ಸಂಸ್ಥೆಗಳ ವಿರುದ್ಧ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಪ್ರಕರಣಗಳು ದಾಖಲಿಸಲಾಗಿದೆ? ಎಷ್ಟು ದಂಡ ವಿಧಿಸಲಾಗಿದೆ ಹಾಗೂ ಎಷ್ಟು ಸಂಸ್ಥೆಗಳ ಪರವಾನಿಗೆ ಅಮಾನತುಗೊಳಿಸಲಾಗಿದೆ ಅಥವಾ ರದ್ದುಪಡಿಸಲಾಗಿದೆ? | ಆಹಾರ ಸುರಕ್ಷತಾ ನಿಯಮಗಳನ್ನು ಉಲ್ಲಂಘಿಸಿದ ಹೋಟೇಲ್ ಗಳು, ರಸ್ತೆಬದಿ ಆಹಾರ ಮಳಿಗೆಗಳು, ಬೇಕರಿಗಳು, ಸಿಹಿತಿಂಡಿ ಅಂಗಡಿಗಳು ಹಾಗೂ ಆಹಾರ ಸಂಸ್ಥೆಗಳ ವಿರುದ್ಧ ಕಳೆದ ಮೂರು ವರ್ಷಗಳಲ್ಲಿ 1026 ಪ್ರಕರಣಗಳನ್ನು ದಾಖಲಿಸಲಾಗಿದ್ದು, ರೂ.89,91,700/-ದಂಡ ವಿಧಿಸಲಾಗಿರುತ್ತದೆ ಉಳಿದ 471 ಪ್ರಕರಣಗಳು ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಿಸುವ ಹಂತದಲ್ಲಿರುತ್ತದೆ.<br><br>ಅಸುರಕ್ಷಿತ/Substandard ಎಂದು ಕಂಡುಬಂದ ಆಹಾರ ಮಾದರಿಗಳ ಸಂಸ್ಥೆಯ ಆಹಾರ ಪರವಾನಗಿಯನ್ನು ಅಮಾನತ್ತುಗೊಳಿಸುವ/ರದ್ದುಗೊಳಿಸುವ ಅವಕಾಶ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006, ನಿಯಮ 2011ರಡಿ ಇರುವುದಿಲ್ಲ. |
| ಉ) | ರಾಜ್ಯದಲ್ಲಿ ಆಹಾರ ಮಾದರಿಗಳನ್ನು ತ್ವರಿತವಾಗಿ ಪರೀಕ್ಷಿಸಲು ಅಗತ್ಯವಿರುವ ಪ್ರಯೋಗಾಲಯಗಳು, ಮೊಬೈಲ್ ಫುಡ್ ಟೆಸ್ಟಿಂಗ್ ಲ್ಯಾಬ್ ಗಳು ಹಾಗೂ ತರಬೇತಿ ಪಡೆದ ಆಹಾರ ಸುರಕ್ಷತಾ ಅಧಿಕಾರಿಗಳು ಸಾಕಷ್ಟು ಸಂಖ್ಯೆಯಲ್ಲಿ ಇದ್ದಾರೆಯೇ: ರಸ್ತೆ ಬದಿ ಆಹಾರ ಮಾರಾಟಗಾರರು, ಹೋಟೇಲ್ ಸಿಬ್ಬಂದಿ ಹಾಗೂ ಆಹಾರ ನಿರ್ವಹಿಸುವ ಕಾರ್ಮಿಕರಿಗೆ ಆಹಾರ ಸುರಕ್ಷತೆ ಮತ್ತು ಸ್ವಚ್ಛತೆ ಕುರಿತು ಕಡ್ಡಾಯ ತರಬೇತಿ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ರಾಜ್ಯದಲ್ಲಿ ಆಹಾರ ಮಾದರಿಗಳನ್ನು ತ್ವರಿತವಾಗಿ ಪರೀಕ್ಷಿಸಲು 04 ಸರ್ಕಾರಿ ಆಹಾರ ಪ್ರಯೋಗಾಲಯಗಳು ಹಾಗೂ ಒಂದು ಮೊಬೈಲ್ ಫುಡ್ ಟೆಸ್ಟಿಂಗ್ ಲ್ಯಾಬ್ ಲಭ್ಯವಿರುತ್ತದೆ.<br><br>ಆಹಾರ ಸುರಕ್ಷತಾ ವಿಭಾಗದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆರೋಗ್ಯ ನಿರೀಕ್ಷಣಾಧಿಕಾರಿಗಳು ನಿಯೋಜನೆ ಮೇರೆಗೆ ಆಹಾರ ಸುರಕ್ಷತಾಧಿಕಾರಿಗಳ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಇತ್ತೀಚೆಗೆ KEA ಮೂಲಕ 69 ಆಹಾರ ಸುರಕ್ಷತಾಧಿಕಾರಿಗಳ ಹುದ್ದೆಯನ್ನು ಹಾಗು 18 ಕಿರಿಯ ಆಹಾರ ವಿಶ್ಲೇಷಕರ ಹುದ್ದೆಗಳನ್ನು ನೇರ ನೇಮಕಾತಿಯಡಿ ಭರ್ತಿ ಮಾಡಿಕೊಳ್ಳುವ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.<br><br>ರಸ್ತೆ ಬದಿ ಆಹಾರ ಮಾರಾಟಗಾರರು, ಹೋಟೇಲ್ ಸಿಬ್ಬಂದಿ ಹಾಗೂ ಆಹಾರ ನಿರ್ವಹಿಸುವ ಕಾರ್ಮಿಕರಿಗೆ ಆಹಾರ ಸುರಕ್ಷತೆ ಮತ್ತು ಸ್ವಚ್ಛತೆ ಕುರಿತು ಕಡ್ಡಾಯವಾಗಿ FoSTaC ತರಬೇತಿಯನ್ನು ನೀಡುವಂತೆ ಕ್ರಮವಹಿಸಲು ಜಿಲ್ಲಾ ಅಂಕಿತಾಧಿಕಾರಿಗಳಿಗೆ ಸೂಕ್ತ ನಿರ್ದೇಶನಗಳನ್ನು ನೀಡಲಾಗಿರುತ್ತದೆ. |

ಆಕುಕ 96 ಎಸ್‌ಬಿವಿ 2026

(ಯು.ಟಿ. ಖಾದರ್ ಫರೀದ್)
ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಹಾಗೂ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

## ಅನುಬಂಧ-1

**ಕಳೆದ ಮೂರು ವರ್ಷಗಳಲ್ಲಿ ರಾಜ್ಯಾದ್ಯಂತ ಸಂಗ್ರಹಿಸಿ ಪರೀಕ್ಷಿಸಲಾದ ಕಾನೂನಾತ್ಮಕ ಆಹಾರ ಮಾದರಿಗಳ ಸಂಖ್ಯೆ, ಅವುಗಳಲ್ಲಿ ಅಸುರಕ್ಷಿತ ಮತ್ತು Substandard ಎಂದು ವರದಿಯಾದ ಆಹಾರ ಮಾದರಿಗಳ ಸಂಖ್ಯೆಯ ಜಿಲ್ಲಾವಾರು ಮಾಹಿತಿಯ ವಿವರಗಳು**

| Sl.No | Name of the Districts | No.of Legal Samples collected | No of Unsafe | No of substandared |
|---|---|---|---|---|
| 1 | Bagalkot | 1122 | 15 | 46 |
| 2 | Bengaluru Rural | 600 | 25 | 17 |
| 3 | Banglore Urban | 746 | 43 | 19 |
| 4 | BBMP East | 976 | 21 | 13 |
| 5 | B.B.M.P North | 958 | 11 | 6 |
| 6 | B.B.M.P South | 1081 | 25 | 24 |
| 7 | B.B.M.P West | 895 | 13 | 11 |
| 8 | Belagavi | 1849 | 86 | 32 |
| 9 | Bellary | 229 | 12 | 6 |
| 10 | Bidar | 1159 | 43 | 37 |
| 11 | Vijayapura | 958 | 6 | 95 |
| 12 | Chamarajanagar | 308 | 19 | 13 |
| 13 | Chikkaballapur | 302 | 20 | 24 |
| 14 | Chikkamagaluru | 603 | 6 | 8 |
| 15 | Chitradurga | 662 | 15 | 15 |
| 16 | Dakshina Kannada | 713 | 6 | 25 |
| 17 | Davanagere | 1234 | 12 | 21 |
| 18 | Gadag | 703 | 21 | 34 |
| 19 | Kalaburgi | 1465 | 8 | 11 |
| 20 | Hassan | 590 | 5 | 17 |
| 21 | Haveri | 1030 | 19 | 24 |
| 22 | Kodagu | 418 | 4 | 7 |
| 23 | Kolar | 355 | 16 | 13 |
| 24 | Koppala | 957 | 37 | 22 |
| 25 | Mandya | 1472 | 51 | 21 |
| 26 | Raichur | 1055 | 22 | 16 |
| 27 | Ramangara | 183 | 23 | 14 |
| 28 | Shimoga | 376 | 8 | 25 |
| 29 | Tumkur | 446 | 19 | 15 |
| 30 | Yadagiri | 386 | 16 | 9 |
| 31 | Udupi | 386 | 10 | 10 |
| 32 | Uttara Kannada | 529 | 16 | 22 |
| 33 | Mysuru City | 949 | 43 | 11 |
| 34 | Mysuru | 927 | 23 | 25 |
| 35 | Dharwad | 278 | 11 | 12 |
| 36 | HDMC | 562 | 10 | 9 |
| 37 | Vijayanagara | 233 | 10 | 18 |
| **Total** | | **27695** | **750** | **747** |